# ದೇವಸ್ಥಾನದ ಅಂಗಣದಿಂದ ಜಗವೆಂಬ ವೇದಿಕೆಗೆ

## ಮಣಿಪುರಿ ನೃತ್ಯಪಟು-ವಿದ್ವಾಂಸೆ ದರ್ಶನಾ ಜವೇರಿ ಸಂದರ್ಶನ

**ಕೋಡಿಬೆಟ್ಟು ರಾಜಲಕ್ಷ್ಮಿ**

ಮುಂಬೈಯ ಗುಜರಾತಿ ಕುಟುಂಬದಲ್ಲಿ ಜನಿಸಿದ ದರ್ಶನಾ ಜವೇರಿ ಅವರಿಗೆ ಮಣಿಪುರಿ ನೃತ್ಯದ ಪರಿಚಯವಾಗುವ ವೇಳೆಗಾಗಲೇ ಅವರ ಅಕ್ಕಂದಿರಾದ ನಯನಾ, ರಂಜನಾ ಮತ್ತು ಸುವರ್ಣಾ ಕುಣಿತದ ಪಾಠಗಳನ್ನು ಕಲಿಯತೊಡಗಿದ್ದರು. ಅಕ್ಕಂದಿರ ಹಾದಿಯನ್ನೇ ಆರಿಸಿಕೊಂಡ ಕಿರಿಯ ಸೋದರಿ ದರ್ಶನಾ, ಆ ದಾರಿಯಲ್ಲಿ ನಡೆಯುತ್ತಾ ನಡೆಯುತ್ತಾ ತಮ್ಮ ಬದುಕನ್ನೇ ಮಣಿಪುರಿ ನೃತ್ಯದ ವಿಕಾಸಕ್ಕೆ ಅರ್ಪಿಸಿಕೊಂಡರು. ಅವರ ಕಾರ್ಯವಿಸ್ತಾರದ ಹಿಂದೆ ಗುರು ಬಿಪಿನ್ ಸಿಂಗ್ ಅವರ ಜ್ಞಾನಸಂಪನ್ಮೂಲದ ಆಧಾರವಿದೆ. ನಾಲ್ವರು ಶಿಷ್ಯೆಯರನ್ನು ಅವರು ನೃತ್ಯಕಲಾವಿದೆಯರನ್ನಾಗಿ ರೂಪಿಸಿದರು. ಮಣಿಪುರದ ದೇವಸ್ಥಾನಗಳಿಗೆ ಭೇಟಿ ಕೊಟ್ಟು ನೃತ್ಯಪ್ರಕಾರಗಳನ್ನು ಕಲಿಸಿದರು. ಅಲ್ಲಿನ ಹಳ್ಳಿಗಳಲ್ಲಿ ವಾಸವಾಗಿದ್ದ ಗುರುಗಳನ್ನು ಸಂಪರ್ಕಿಸಿ ನೃತ್ಯಜ್ಞಾನದ ದಾಖಲೀಕರಣ ಮಾಡಲು ಮಾರ್ಗದರ್ಶನ ಮಾಡಿದರು. ದೇವಸ್ಥಾನದ ಪ್ರಾಂಗಣಗಳಿಗೆ ಸೀಮಿತವಾಗಿದ್ದ ನೃತ್ಯಪ್ರಕಾರವನ್ನು ತಮ್ಮ ಶಿಷ್ಯೆಯರ ಮೂಲಕ ವೇದಿಕೆಗಳಿಗೆ ಪರಿಚಯಿಸಿದರು. ಹೀಗೆ ನೃತ್ಯ ಮತ್ತು ಅಧ್ಯಯನದಲ್ಲಿ ತೊಡಗಿಸಿಕೊಂಡ ನಾಲ್ವರು ಸೋದರಿಯರ ಪೈಕಿ ಹಿರಿಯರಾದ ಮೂವರೂ ಮದುವೆಯಾಗಿ ಕಾರ್ಯಕ್ಷೇತ್ರದಿಂದ ತುಸು ಬದಿಗೆ ಸರಿದಾಗ, ಸಂಶೋಧನೆ, ಅಧ್ಯಯನ, ಬೋಧನೆಯ ಎಲ್ಲ ಕೆಲಸಗಳನ್ನು ತಮ್ಮ ಹೆಗಲ ಮೇಲೆ ಹೊತ್ತು ದರ್ಶನಾ ಜವೇರಿ ಕೆಲಸ ಮಾಡಿದರು. ಭಕ್ತಿಪರಂಪರೆಗೆ ಸೀಮಿತವಾಗಿ, ಮಣಿಪುರಿ ಸಮುದಾಯದವರು ಪ್ರಸ್ತುತಪಡಿಸುತ್ತಿದ್ದ ಅಪೂರ್ವ ನೃತ್ಯಪ್ರಕಾರವೊಂದನ್ನು ಕಲಿಯುವ ಅವಕಾಶ ಎಲ್ಲರಿಗೂ ದೊರೆಯಬೇಕು ಎಂಬ ಆಶಯದಿಂದ ನೃತ್ಯ ಕಲಿಕಾ ಕೋರ್ಸ್‌ಗಳನ್ನು ರೂಪಿಸಲು ಶ್ರಮಿಸಿದರು. ಇಂದು ದೇಶದಾದ್ಯಂತ ಹಾಗೂ ವಿದೇಶದಲ್ಲಿಯೂ ಮಣಿಪುರಿ ನೃತ್ಯಪ್ರಕಾರವು ಪಸರಿಸಿದ್ದರೆ ಅದಕ್ಕೆ ಗುರು ಬಿಪಿನ್ ಸಿಂಗ್ ಮತ್ತು ಜವೇರಿ ಸೋದರಿಯರು ಕಾರಣ. ಪ್ರಸ್ತುತ ಮುಂಬೈಯಲ್ಲಿ ನೆಲೆಸಿರುವ 83 ವರ್ಷದ ದರ್ಶನಾ ಜವೇರಿ ಮಣಿಪುರಿ ನೃತ್ಯದ ಸಾಂಸ್ಕೃತಿಕ ರಾಯಭಾರಿಯಂತೆ ಕಾರ್ಯ ನಿರ್ವಹಿಸಿರುವ ಅನನ್ಯ ಕಲಾವಿದೆ. ವಿಶಾಲ ಓದು ಮತ್ತು ಸಂಶೋಧನೆಯು ಅವರ ವ್ಯಕ್ತಿತ್ವಕ್ಕೆ ವಿಶಿಷ್ಟ ವರ್ಚಸ್ಸು ಕೊಟ್ಟಿದೆ. ಈಗಲೂ ಅವರು ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳ ಸಭೆಗಳಲ್ಲಿ ಭಾಗವಹಿಸಿ ಮಣಿಪುರಿ ನೃತ್ಯ ಪಠ್ಯವನ್ನು ರೂಪಿಸುವಲ್ಲಿ ಸಕ್ರಿಯ ಸಂಶೋಧಕಿ. ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಕಾಳಿದಾಸ ಸನ್ಮಾನ್ ಸೇರಿದಂತೆ ಅನೇಕ ಪುರಸ್ಕಾರಗಳು ಅವರಿಗೆ ಸಂದಿವೆ. ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. ಅವರೊಡನೆ ನಡೆಸಿದ ಸುದೀರ್ಘ ಮಾತುಕತೆಯ ಮುಖ್ಯಾಂಶಗಳು ಇಲ್ಲಿವೆ.